ಶ್ರೀ ಎಸ್. ರುದ್ರಪ್ಪ : ದ್ವಾರನಹಳ್ಳಿ ಕೆರೆ 1994ರಲ್ಲಿ ಪೂರ್ಣವಾಗುತ್ತದೆಂದು ಹೇಳಿದ್ದಾರೆ. ಇದಕ್ಕೆ ಇನ್ನೂ ಸುಮಾರು 15 ಲಕ್ಷ ರೂಪಾಯಿಗಳು ಬೇಕಾಗಿದೆ. ಜಿಲ್ಲಾಪರಿಷತ್ತಿನವರು ಈ 15 ಲಕ್ಷ ರೂಪಾಯಿಗಳನ್ನು ಒದಗಿಸುತ್ತಾರೆಯೇ? ಪೂರ್ತಿ ಮಾಡುವ ಬಗ್ಗೆ ಸುಮ್ಮನೆ ಏಕೆ ಸುಳ್ಳು ಆಶ್ವಾಸನೆಯನ್ನು ಕೊಡುತ್ತೀರಿ, ಸದನದಲ್ಲಿ ನೇರವಾಗಿ ಉತ್ತರವನ್ನು ಕೊಡಲಿ. ಇದುವರೆಗೆ ಜಿಲ್ಲಾಪರಿಷತ್ತಿನವರು ಕೇವಲ ಒಂದು ಕೆರೆಗೆ ಎರಡು ಲಕ್ಷ ರೂಪಾಯಿಗಳನ್ನುಮಂಜೂರು ಮಾಡಿದ್ದಾರೆ. ಇನ್ನೂ ಮೂರು ಕೆರೆಗಳಿಗೆ ಹಣವನ್ನು ಮಂಜೂರು ಮಾಡಿಲ್ಲದೇ ಇರುವುದರಿಂದ ತಾವು ಸುಮ್ಮನೆ ಸುಳ್ಳು ಆಶ್ವಾಸನೆಯನ್ನು ಕೊಡುವುದನ್ನು ಬಿಟ್ಟು ನೇರವಾಗಿ ಸದನದಲ್ಲಿ ಇದನ್ನು ಯಾವಾಗ ಪೂರ್ಣ ಮಾಡುತ್ತೀರಿ ಎಂಬುದನ್ನು ಹೇಳಬೇಕು.

ಡಾ॥ ಆರ್. ಬಿ. ಚೌಧರಿ : ಇವುಗಳು ಪೂರ್ಣಗೊಳ್ಳುವ ಹಂತದಲ್ಲಿರುವುದರಿಂದ ಜಿಲ್ಲಾಪರಿಷತ್ತಿನವರು ಇದಕ್ಕೆ ಹಣವನ್ನು ಕೊಟ್ಟು ಪೂರ್ಣಗೊಳಿಸುತ್ತಾರೆ.

ವಿಷಯ : ಇಂಡಿ ತಾಲ್ಲೂಕಿನಲ್ಲಿ ಕೆ. ಇ. ಬಿ. ಯ ಸೆಕ್ಷನ್ ಆಫೀಸ್.

Q : 1778

ಶ್ರೀ ಮನೋಹರ. ಯು. ಐನಾಪುರ (ಬಳ್ಳೊಳ್ಳಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕು ಹೊರಟ್ಟಿ, ಆತರ್ಗ ಮತ್ತು ದುಲಖೇಡ್‌ನಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸೆಕ್ಷನ್ ಆಫೀಸುಗಳಿಗೆ ಸರ್ಕಾರವು ಅಂಗೀಕಾರ ನೀಡಿದೆಯೇ?

ಆ) ಇದ್ದಲ್ಲಿ ಯಾವಾಗ ಪ್ರಾರಂಭ ಮಾಡಲಾಗುವುದು?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಸದ್ಯಕ್ಕೆ ಮಂಡಳಿಯ ಮುಂದೆ ಇಂಡಿ ತಾಲ್ಲೂಕು ಹೊರಟ್ಟಿ, ಆತರ್ಗ ಮತ್ತು ದುಲಖೇಡ್‌ಗೆ ಸೆಕ್ಷನ್ ಆಫೀಸುಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಇರುವುದಿಲ್ಲ.

ಆ) ಮೇಲೆ (ಅ)ಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ

ಶ್ರೀ ಎ. ಟಿ. ರಾಮಸ್ವಾಮಿ : (ಶ್ರೀ ಮನೋಹರ ಯು. ಐನಾಪುರ ಅವರ ಪರವಾಗಿ) : ಸನ್ಮಾನ್ಯ ಅಧ್ಯಕ್ಷರೇ, ಇಂಡಿ ತಾಲ್ಲೂಕಿನ ಹೊರಟ್ಟಿ, ಆತರ್ಗ ಹಾಗೂ ದುಲಖೇಡ್‌ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಸೆಕ್ಷನ್ ಆಫೀಸುಗಳನ್ನು ಮಂಜೂರು ಮಾಡತಕ್ಕ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಕನಿಷ್ಟ ಈ ಮೂರು ಗ್ರಾಮಗಳಲ್ಲಿ ಸೆಕ್ಷನ್ ಆಫೀಸುಗಳ ಅವಶ್ಯಕತೆ ಇದೆ ಎನ್ನತಕ್ಕದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆ ರೀತಿ ಏನಾದರೂ ಬಂದಿದ್ದರೆ ಅದನ್ನು ಯಾವಾಗ

ಮಂಜೂರು ಮಾಡಿಕೊಡುತ್ತೀರಿ?

ಶ್ರೀ ಎಸ್. ಎಂ. ಕೃಷ್ಣ : ಸನ್ಮಾನ್ಯ ಅಧ್ಯಕ್ಷರೇ, ಈಗ ವಿದ್ಯುಚ್ಛಕ್ತಿ ಮಂಡಳಿಯಲ್ಲಿ ಒಂದು ಸೆಕ್ಷನ್ ಆಫೀಸು ತೆರೆಯಬೇಕಾದರೆ ಕನಿಷ್ಟ ಮೂರು ಸಾವಿರ ಇನ್‌ಸ್ಟಲೇಷನ್ ಇರಬೇಕೆಂದು ನಾರ್ಮ್ಸ್‌ನ್ನು ಹಾಕಿಕೊಂಡಿದ್ದೇವೆ. ಆದರೆ ಇಂಡಿ ತಾಲ್ಲೂಕಿನ ಹೊರಟಿ, ಆತರ್ಗ ಹಾಗೂ ದುಲಬೇಡ್‌ಗಳಲ್ಲಿ ಮೂರು ಸಾವಿರ ಇನ್‌ಸ್ಟಲೇಷನ್ ಇಲ್ಲದೇ ಇರುವುದರಿಂದ ನಾವು ಅಲ್ಲಿ ಸೆಕ್ಷನ್ ಆಫೀಸ್‌ಗಳನ್ನು ತೆಗೆಯತಕ್ಕ ಪ್ರಸ್ತಾವನೆ ಸದ್ಯಕ್ಕೆ ವಿದ್ಯುಚ್ಛಕ್ತಿ ಮಂಡಳಿಯ ಮುಂದೆ ಇಲ್ಲ.

ವಿಷಯ : ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಯೋಜನೆಗಳು.

Q : 1446

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಅಚ್ಚುಕಟ್ಟು ಅಭಿವೃದ್ಧಿ ಯೋಜನೆಗಳಿರುವುವು ಎಷ್ಟು?
ಆ) ಪ್ರತಿಯೊಂದು ಅಚ್ಚುಕಟ್ಟು ಅಭಿವೃದ್ಧಿ ಯೋಜನೆಗೆ ಇಲ್ಲಿಯವರಗೆ ಪ್ರತಿ ವರ್ಷ ಖರ್ಚು ಮಾಡಲಾಗಿರುವ ಹಣವೆಷ್ಟು?
ಇ) ಪ್ರತಿ ವರ್ಷ ಈ ಒಂದು ವಿಭಾಗದಿಂದ ಅಭಿವೃದ್ಧಿ ಕೆಲಸದಲ್ಲಿ ಆಗುತ್ತಿರುವ ಪ್ರಗತಿ ಬಗ್ಗೆ ಸರ್ಕಾರದ ಅನಿಸಿಕೆ ಏನು?

ಶ್ರೀ ಶ್ರೀರಂಗದೇವರಾಯಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಐದು.
ಆ) ಖರ್ಚಿನ ವಿವರವನ್ನು ಅನುಬಂಧ - 1 ರಲ್ಲಿ ಒದಗಿಸಲಾಗಿದೆ.
ಇ) ಪ್ರಗತಿ ಸಮಾಧಾನಕರವಾಗಿದೆ.